154 ೨೮೮ ನಿ= 330 = 76
4KK
2908

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ, ಶ್ರೀ ಪಿ.ಹೆಚ್.ಪೂಜಾರ್, ಶ್ರೀ ಎಸ್.ವಿ.ಸಂಕನೂರು, ಶ್ರೀ ಎಸ್.ಜಿ.ನಮೋಶಿ, ಡಾ:ತಳವಾರ ಸಾಬಣ್ಣ, ಶ್ರೀ ಬಿ.ಜಿ.ಪಾಟೀಲ್, ಶ್ರೀ ಎನ್. ರವಿಕುಮಾರ್, ಶ್ರೀ ಡಿ.ಎಸ್.ಅರುಣ್, ಶ್ರೀ ಕೆ.ಎಸ್.ನವೀನ್ ಹಾಗೂ ಶ್ರೀ ಹೆಚ್.ಪಿ. ನಾಗೇಶ್ ಇವರುಗಳು ನಿಯಮ 330 ಮೇರೆಗೆ ನೀಡಿರುವ ಸೂಚನೆಗೆ ಮಾಹಿತಿ.**

ವಿಷಯ: ಕೃಷ್ಣಾ ಮೇಲ್ದಂಡೆ ಯೋಜನೆಯು ಸರ್ಕಾರದ ಮಹತ್ವಕಾಂಕ್ಷೆಯ ನೀರಾವರಿ ಯೋಜನೆಯಾಗಿದ್ದು, ಸದರಿ ಯೋಜನೆಯ ಹಂತ-3 ರ ಅನುಷ್ಠಾನದಲ್ಲಿ ಮುಳುಗಡೆ ಹೊಂದುವ ಮತ್ತು ಹೊಂದಿದ ಸಂತ್ರಸ್ಥ ರೈತರಿಗೆ ಪರಿಹಾರ ಧನ, ಭೂ-ಸ್ವಾಧೀನ, ಪುನರ್ವಸತಿ ಕೇಂದ್ರಗಳ ನಿರ್ಮಾಣ ಅಥವಾ ನಿರ್ಮಿಸಿರುವುದು ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಕುರಿತು.

***

ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ತೀರ್ಪಿನನ್ವಯ ರಾಜ್ಯಕ್ಕೆ ಒಟ್ಟಾರೆ 173 ಟಿ.ಎಂ.ಸಿ. ನೀರಿನ ಹಂಚಿಕೆಯಾಗಿದ್ದು, ಈ ಪೈಕಿ ಕೃಷ್ಣಾ ಮೇಲ್ದಂಡೆ ಯೋಜನೆಗೆ ಹಂತ-3ರ ಅನುಷ್ಠಾನಕ್ಕಾಗಿ 130 ಟಿ.ಎಂ.ಸಿ. ನೀರಿನ ಹಂಚಿಕೆಯಾಗಿರುತ್ತದೆ. ಕೃಷ್ಣಾ ಮೇಲ್ದಂಡೆಯೋಜನೆ ಹಂತ-3 ಕ್ಕೆ ಹಂಚಿಕೆಯಾಗಿರುವ ನೀರಿನ ಬಳಕೆಗೆ ಆಲಮಟ್ಟಿಜಲಾಶಯದ ನೀರಿನ ಸಂಗ್ರಹಣೆ ಮಟ್ಟವನ್ನು ಆರ್.ಎಲ್ 519.60 ಮೀ. ನಿಂದಆರ್.ಎಲ್ 524.256 ಮೀ.ಗೆ (4.656 ಮೀ.) ಎತ್ತರಿಸುವುದಾಗಿದ್ದು, ಇದು ಕೃಷ್ಣಾ ನ್ಯಾಯಾಧೀಕರಣ-2ರ ಅಂತಿಮ ಐತೀರ್ಪು ಕೇಂದ್ರ ಸರ್ಕಾರದಿಂದ ಹೊರಡಿಸುವ ಅಧಿಸೂಚನೆಗೆ ಒಳಪಟ್ಟಿದ್ದು, ಐತೀರ್ಪುಇನ್ನೂ ಅಧಿಸೂಚನೆ ಆಗಬೇಕಾಗಿದೆ.

**ಕೃ.ಮೇ.ಯೋ. ಹಂತ-3 ರಡಿ ಮುಳುಗಡೆ ಹೊಂದುವ ಜಮೀನುಗಳಿಗೆ ಭೂ ಪರಿಹಾರ ನೀಡುವಕುರಿತು:**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ ಎತ್ತರಿಸುವುದರಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ 188 ಗ್ರಾಮಗಳ ಸುಮಾರು 75,563 ಎಕರೆ ಕ್ಷೇತ್ರದ ಜಮೀನುಗಳು ಮುಳುಗಡೆಯಾಗುತ್ತಿದ್ದು, ಈ ಪೈಕಿ ಇದುವರೆಗೆ 2,543 ಎಕರೆ ಪ್ರದೇಶವನ್ನು ಭೂಸ್ವಾಧೀನಪಡಿಸಿಕೊಂಡಿದ್ದು, ಭೂಪರಿಹಾರ ಒದಗಿಸಲಾಗಿದೆ. ಇನ್ನುಳಿದ 73,020 ಎಕರೆ ಪ್ರದೇಶಕ್ಕೆ ಭೂಸ್ವಾಧೀನ ಪ್ರಕ್ರಿಯೆ ವಿವಿಧ ಹಂತದ ಪ್ರಗತಿಯಲ್ಲಿದೆ. ಒಟ್ಟಾರೆ, ಮುಳುಗಡೆ ಹೊಂದುವ ಜಮೀನು, ಪುನರ್ವಸತಿ ನಿರ್ಮಾಣಕ್ಕಾಗಿ ಹಾಗೂ ಕಾಲುವೆ ನಿರ್ಮಾಣಕ್ಕಾಗಿ ಭೂಸ್ವಾಧೀನಪಡಿಸಿಕೊಂಡ ಕ್ಷೇತ್ರಕ್ಕೆ ಇಲ್ಲಿಯವರೆಗೆ ರೂ.2,739 ಕೋಟಿ ವೆಚ್ಚವನ್ನು ಭರಿಸಲಾಗಿದೆ.

ಮುಂದುವರೆದು, ಕಂದಾಯ ಇಲಾಖೆಯ ಒಪ್ಪಂದದ ಐತೀರ್ಪು ಆದೇಶ ದಿನಾಂಕ:25.01.2023 ಅನ್ನು ಒಪ್ಪಿದ್ದಲ್ಲಿ, ಸದರಿ ಆದೇಶದನ್ವಯ, ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3ಕ್ಕೆ ಸೀಮಿತವಾಗಿ ಭೂಸ್ವಾಧೀನಕ್ಕೆ ಒಳಪಡುವ ಒಣ ಭೂಮಿಗೆ ರೂ.20 ಲಕ್ಷ ಪ್ರತಿ ಎಕರೆ ಹಾಗೂ ನೀರಾವರಿ / ಬಾಗಾಯತ್ ಜಮೀನುಗಳಿಗೆ ರೂ.24.00 ಲಕ್ಷ ಪ್ರತಿ ಎಕರೆರಂತೆ ನಿಗದಿಪಡಿಸಲಾದ 'Consent Award ರನ್ವಯ ಭೂಪರಿಹಾರ ನೀಡಲು ಕ್ರಮ ವಹಿಸಲಾಗುತ್ತಿದೆ.

ಒಪ್ಪಿಗೆ ನೀಡದ ಸಂತ್ರಸ್ಥರಿಗೆ ಹೊಸ ಭೂಸ್ವಾಧೀನಕಾಯ್ದೆರನ್ವಯ 2013ರ ಕಲಂ 26 ರಿಂದ 30ರ ಪ್ರಕಾರ ಪರಿಹಾರ ನೀಡಲು ಕ್ರಮ ವಹಿಸಲಾಗುತ್ತಿದೆ.

**ಕೃ.ಮೇ.ಯೋಹಂತ-3ರಡಿ ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್ ವಸತಿಕುರಿತು:**

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರಡಿ ಆಲಮಟ್ಟಿ ಜಲಾಶಯದ ಸಂಗ್ರಹಣೆ ಮಟ್ಟ ಎತ್ತರಿಸುವುದರಿಂದ ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಮುಳುಗಡೆ ಹೊಂದುವ ಜಮೀನುಗಳ ಭೂಸ್ವಾಧೀನತೆ, ಮುಳುಗಡೆ ಹೊಂದುವ 20 ಗ್ರಾಮಗಳ ಪುನರ್ ವಸತಿ ಹಾಗೂ ಕಾಲುವೆಗಳ ಜಾಲಗಳ ನಿರ್ಮಾಣಕ್ಕಾಗಿ ಒಟ್ಟಾರೆ 1.34 ಲಕ್ಷ ಎಕರೆ ಜಮೀನು ಹೊಸ ಭೂಸ್ವಾಧೀನ ಕಾಯ್ದೆ ಯನ್ವಯ ಭೂಸ್ವಾಧೀನಪಡಿಸಿಕೊಳ್ಳುವುದಾಗಿರುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-3 ರ ಅನುಷ್ಠಾನಕ್ಕಾಗಿ ಬಾಧಿತವಾಗುವ 20 ಗ್ರಾಮಗಳಿಗೆ ಎದುರಾಗಿ 24 ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲು ಯೋಜಿಸಿದ್ದು, ಇದಕ್ಕಾಗಿ 4,629ಎ-36ಗುಂ. ಜಮೀನಿನ ಅವಶ್ಯಕತೆ ಇರುತ್ತದೆ. ಈ ಪೈಕಿ 1846.08 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಪ್ರಸ್ತುತ 9 ಕೇಂದ್ರಗಳಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಬಾಕಿ ಉಳಿದ ಕೇಂದ್ರಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ಇಲ್ಲಿಯವರೆಗೆ ರೂ.102.96 ಕೋಟಿ ವೆಚ್ಚ ಭರಿಸಲಾಗಿದೆ.

ಸಂಖ್ಯೆ:ಜಸಂಇ 113 ಡಬ್ಲ್ಯೂಬಿಎಂ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು